Language and Literacy

# A language-rich classroom

## ಭಾಷಾ ಸಮೃದ್ಧ ತರಗತಿ





Teacher Education through School-based Support in India

www.TESS-India.edu.in

http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL02TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಈ ಘಟಕದಲ್ಲಿ, ಶಾಲಾ ಪರಿಸರದಲ್ಲಿ ವಿದ್ಯಾರ್ಥಿಗಳನ್ನು ವೈವಿಧ್ಯಮಯ ಮಾತು ಮತ್ತು ಬರವಣಿಗೆಯಲ್ಲಿ ಸಹಜವಾಗಿ ತೊಡಗಿಸುವ ಸಲುವಾಗಿ ಸರಳ ಆದರೆ ಪರಿಣಾಕಾರಿಯಾದ ರೀತಿಯಲ್ಲಿ ಒಂದು ಕಲ್ಪನಾತ್ಮಕ (imaginative), ಭಾಷಾ ಸಮೃದ್ಧ ತರಗತಿಯನ್ನು ಸೃಷ್ಟಿಸುವುದನ್ನು ಕಂಡುಕೊಳ್ಳುವಿರಿ.

ಶಾಲೆಯ ಹೊರಗಿನ ಮೌಖಿಕ ಮತ್ತು ಲಿಖಿತ ಸಂಪನ್ಮೂಲಗಳನ್ನು ನಿಮ್ಮ ವಿದ್ಯಾರ್ಥಿಗಳಿಗೆ ಪ್ರಸ್ತುತಪಡಿಸಬಹುದಾದ ವಿಧಾನಗಳು, ತರಗತಿ ಕೋಣೆಯ ಗೋಡೆ ಬರಹಗಳ ಬಳಕೆಯ ಕುರಿತ ವಿಚಾರಗಳು ಹಾಗೂ ಅವರಿಗೆ ಖುಷಿ ಕೊಡುವಂತಹ, ಪ್ರಾಯೋಗಿಕ, ಮಿತವ್ಯಯಕಾರಿಯಾದ ಓದುವ ಮೂಲೆಯನ್ನು ಸ್ಥಾಪಿಸಲು ಅವಶ್ಯಕವಾದ ಸಲಹೆಗಳನ್ನು ನಿಮಗೆ ಪರಿಚಯಿಸಲಾಗುವುದು.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ತರಗತಿಯಲ್ಲಿ ಆಕರ್ಷಕವಾದ ಬರವಣಿಗೆ - ಆಧಾರಿತ ಗೋಡೆ ಅಲಂಕಾರ ಮಾಡುವ ರೀತಿ
- ನಿಮ್ಮ ವಿದ್ಯಾರ್ಥಿಗಳಿಗಾಗಿ ಓದುವ ಮೂಲೆಯನ್ನು ಸ್ಥಾಪಿಸುವ ಬಗೆ
- ತರಗತಿಯಲ್ಲಿ ರೇಡಿಯೋವನ್ನು  ಮೌಖಿಕ ಭಾಷೆಯ ಮೂಲ ಆಕರವಾಗಿ ಬಳಸುವ ರೀತಿ

## ಈ ಮಾರ್ಗ ಏಕೆ ಮುಖ್ಯ?

ಸಾಂಪ್ರದಾಯಿಕ ತರಗತಿಗಳಲ್ಲಿ, ಶಿಕ್ಷಕರು ಮೌಖಿಕ ಭಾಷೆಯ ಮುಖ್ಯ ಆಕರವಾಗಿದ್ದರೆ, ಪಠ್ಯಪುಸ್ತಕಗಳು ಲಿಖಿತ ಭಾಷೆಯ ಮುಖ್ಯ ಆಕರವಾಗಿರುತ್ತವೆ. ಸಮಯದ ಅಭಾವ ಮತ್ತು ಸೀಮಿತ ಸಂಪನ್ಮೂಲಗಳು ಇವುಗಳಿಗೆ ಪೂರಕವಾಗಿ ಪರ್ಯಾಯಗಳನ್ನು ಕಂಡುಕೊಳ್ಳದಂತೆ ಮಾಡುತ್ತವೆ.

ವಿವಿಧ ರೀತಿಯ ಸಹಜ ಮಾತು ಮತ್ತು ಬರವಣಿಗೆ ಆಕರಗಳಿಗೆ ತೆರೆದುಕೊಳ್ಳುವುದರಿಂದ, ಅದರೊಂದಿಗೆ ತೊಡಗಿಕೊಳ್ಳುವುದರಿಂದ, ವಿದ್ಯಾರ್ಥಿಗಳ ಭಾಷೆ ಮತ್ತು ಸಾಕ್ಷರತೆಯ ಬೆಳವಣಿಗೆಗೆ ಸಾಕಷ್ಟು ಪ್ರಯೋಜನವಿದೆ. ವೈವಿಧ್ಯಮಯ, ಅರ್ಥಪೂರ್ಣ ಮೌಖಿಕ ಮತ್ತು ಲಿಖಿತ ಸಂವಹನದ ಉದಾಹರಣೆಗಳಿಂದ ವಿದ್ಯಾರ್ಥಿಗಳ ಜ್ಞಾನವನ್ನು ಸಮೃದ್ಧಗೊಳ್ಳುವ ಸಮಯದಲ್ಲೇ, ವಿವಿಧ ವಿಷಯಗಳಿಗೆ ಸಂಬಂಧಿಸಿದ ಪದ/ಪದಗುಚ್ಛಗಳ ಬಳಕೆಯ ತಿಳುವಳಿಕೆಯೂ ಹೆಚ್ಚಿ, ಅವರ ಕಲ್ಪನೆಗಳಿಗೂ ಗರಿ ಮೂಡುವುದು. ತರಗತಿಯಲ್ಲಿ ನಿಮ್ಮ ವಿದ್ಯಾರ್ಥಿಗಳ ಮನೆ ಭಾಷೆಯ ಉದಾಹರಣೆಗಳನ್ನು ನೀಡಿದಲ್ಲಿ, ಅವರಲ್ಲಿರುವ ಭಾಷಾ ವಿಶೇಷತೆಯನ್ನು ಗೌರವಿಸುತ್ತಲೇ, ಸಹಪಾಠಿಗಳಿಗೆ ವಿವಿಧ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪ್ರಶಂಸಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ರೀತಿಯಾಗಿ ಭಾಷಾ ಸಮೃದ್ಧ ತರಗತಿಯನ್ನು ಸೃಷ್ಟಿಸುವುದರಿಂದ ನಿಮ್ಮೆಲ್ಲಾ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಧನಾತ್ಮಕ ಪರಿಣಾಮ ಉಂಟಾಗಲಿದೆ.

ಈ ಘಟಕವು ನಿಮ್ಮ ತರಗತಿಯನ್ನು ಹೆಚ್ಚಿನ ರೀತಿಯಲ್ಲಿ ಭಾಷಾ ಸಮೃದ್ಧಗೊಳಿಸಲು ಬೇಕಾದ ವಿವಿಧ ವಿಧಾನಗಳನ್ನು ಸೂಚಿಸುತ್ತದೆ.

## 1 ಸ್ಥಳೀಯ ಪರಿಸರದಲ್ಲಿನ ಬರವಣಿಗೆಯ ಉದಾಹರಣೆಗಳು

ಮಕ್ಕಳು ತಾವು ಶಾಲೆಗೆ ಸೇರುವ ಸಾಕಷ್ಟು ಮುಂಚಿತವಾಗಿಯೇ ವಿವಿಧ ರೀತಿಯ ಲಿಖಿತ ಭಾಷೆಯನ್ನು ನೋಡಿರುತ್ತಾರೆ_ ಉದಾಹರಣೆಗೆ, ವಾಹನಗಳ ಮೇಲೆ, ಅಂಗಡಿಯ ಹೆಸರುಗಳು, ರಸ್ತೆ ಸೂಚಕಗಳು, ಆಹಾರ ಪೊಟ್ಟಣದ ಚೀಟಿಗಳು, ಜಾಹೀರಾತುಗಳು, ಭಿತ್ತಿಪತ್ರಗಳು, ಬ್ರ್ಯಾಂಡ್ ಹೆಸರುಗಳು, ರಾಜಕೀಯ ಘೋಷಣೆಗಳು, ಹಾಸ್ಯ ಬರಹ/ಚಿತ್ರಗಳು ಹಾಗೂ ಚಿಕ್ಕ ಪ್ರಕಟಣೆ ಪ್ರತಿಗಳು, ಪುಸ್ತಕಗಳು, ಸುದ್ದಿಪತ್ರಿಕೆಗಳು ಮತ್ತು ಮ್ಯಾಗ್ ಜಿನ್ ಗಳಲ್ಲಿ. ಈ ಕೆಳಗಿನ ಚಟುವಟಿಕೆಯು ಪರಿಚಿತವಾದ  ಸ್ಥಳೀಯ ಪರಿಸರದಲ್ಲಿನ ವಿವಿಧ ರೂಪದ ಬರವಣಿಗೆಗಳನ್ನು ಸಂಗ್ರಹಿಸುವುದಾಗಿದ್ದು, ತರಗತಿಯಲ್ಲಿ ಸರಳ ಓದುವಿಕೆ ಮತ್ತು ಚರ್ಚೆಯ ಚಟುವಟಿಕೆಗೆ ಆಧಾರವಾಗುತ್ತದೆ. ಇದು ನಿರ್ದಿಷ್ಟವಾಗಿ ಕಿರಿಯ ವಿದ್ಯಾರ್ಥಿಗಳಿಗೆ ಸೂಕ್ತವಾಗಿದೆ.




**ಚಿತ್ರ 1** ಒಂದು ಬೀದಿಯ ಚಿತ್ರ

### ಚಟುವಟಿಕೆ 1: ನಿಮ್ಮ ತರಗತಿಯಲ್ಲಿ ಪರಿಸರದ ಬರವಣಿಗೆಯ ಬಳಕೆ

ನಿಮ್ಮ ವಿದ್ಯಾರ್ಥಿಗಳಿಗೆ ಪರಿಚಿತ ಅಥವಾ ಆಸಕ್ತಿದಾಯಕವೆನಿಸುವ ಸ್ಥಳೀಯ, ಪರಿಸರದ ಬರವಣಿಗೆಯ ಪಟ್ಟಿಯನ್ನು ತಯಾರಿಸಿ. ಉದಾಹರಣೆಗಳಿಗಾಗಿ ಮನೆಯಲ್ಲಿ, ಕೆಲಸದ ಸ್ಥಳಕ್ಕೆ ಪ್ರಯಾಣಿಸುವಾಗ ಹಾಗೂ ಶಾಲೆಯ ಆವರಣದ ಒಳಗೆ ಹುಡುಕಿ. ನೀವು ಸಂಗ್ರಹಿಸಿದ ಪದ/ಪದಗುಚ್ಛಗಳನ್ನು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕಾಗದದ ಪಟ್ಟಿಗಳ ಮೇಲೆ ಬರೆದು, ಮಡಿಚಿಡಿ.

ಆರಂಭದಲ್ಲಿಯೇ, ನೀವು ಸಂಗ್ರಹಿಸಿದ ಮಾಹಿತಿ ಕುರಿತು ನಿಮ್ಮ ವಿದ್ಯಾರ್ಥಿಗಳಿಗೆ ವಿವರಿಸಿ. ವಿದ್ಯಾರ್ಥಿಗಳ ಜೋಡಿಗಳಿಗೆ, ನೀವು ತಯಾರಿಸಿದ ಕಾಗದದ ಪಟ್ಟಿಗಳನ್ನು ವಿತರಿಸಿ. ಈ ವಿತರಣೆ ಯಾವುದೇ ಕ್ರಮವಿಲ್ಲದೇ ಯಾರಿಗಾದಾದರೂ ಯಾವ ಪಟ್ಟಿಯಾದರೂ ಸಿಗುವಂತೆ ಆಗಬಹುದು ಅಥವಾ ನೀವೇ ನಿರ್ಧರಿಸಿ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಪಟ್ಟಿಯನ್ನು ಆರಿಸಿ ಕೊಡಬಹುದು.

ಜೋಡಿಗಳು ಮಡಿಚಿದ ಕಾಗದದ ಪಟ್ಟಿಗಳನ್ನು ತೆರೆದು, ಇತರ ಸಹಪಾಠಿಗಳು ಅದನ್ನು ಓದಲು ಅನುಕೂಲವಾಗುವಂತೆ ಹಿಡಿದುಕೊಳ್ಳಲು ಹೇಳಿ. ಪ್ರತಿ ಪಟ್ಟಿಗೂ ಸಂಬಂಧಿಸಿದಂತೆ, ಅದು ಎಲ್ಲಿ ಕಾಣಿಸುತ್ತದೆ ಎಂಬುದರ ಕುರಿತು ಸಣ್ಣ ಚರ್ಚೆಯನ್ನು ಏರ್ಪಡಿಸಿ. ಕೆಲವು ಪದ ಮತ್ತು ಅಭಿವ್ಯಕ್ತಿಗಳಿಗೆ ನಿಮ್ಮಿಂದ ವಿವರಣೆ ಅಥವಾ ಹೆಚ್ಚಿನ ಮಾಹಿತಿ ಬೇಕಾಗಬಹುದು.

ಪ್ರತಿ ಜೋಡಿಗೊಂದರಂತೆ ಒಂದು ಖಾಲಿ ಕಾಗದದ ಪಟ್ಟಿಯನ್ನು ಕೊಟ್ಟು, ಮುಂದಿನ ಒಂದು ವಾರದಲ್ಲಿ ಶಾಲೆಯಿಂದ ಅವರವರ ಮನೆಯ ದಾರಿಯಲ್ಲಿ, ಅವರ ಮನೆಯಲ್ಲಿ ಅಥವಾ ನೆರೆಹೊರೆಯಲ್ಲಿ ಕಾಣುವ ಹೊಸ ಪದ/ಪದಗುಚ್ಛಗಳನ್ನು ಬರೆದುಕೊಳ್ಳಲು ತಿಳಿಸಿ. ಇವುಗಳನ್ನು ಅದೇ ರೀತಿಯ ಜೋಡಿ ಚಟುವಟಿಕೆಗೆ ಬಳಸಿಕೊಳ್ಳಿ ಅಥವಾ ಇತರ ವಿದ್ಯಾರ್ಥಿಗಳು ಓದಿ, ಅವುಗಳ ಕುರಿತು ಮಾತಾಡುವಂತಾಗಲು ಗೋಡೆಯ ಮೇಲೆ ಪ್ರದರ್ಶಿಸಿ.

ತಮ್ಮ ಮನೆ ಅಥವಾ ಹಳ್ಳಿಯಿಂದ ಯಾವುದೇ ಅನಗತ್ಯ ಎನಿಸಿದ ಮುದ್ರಿತ ಸಾಮಗ್ರಿಯನ್ನು ತರಗತಿಗೆ ತರಲು ಹೇಳಿ. ಅದರಿಂದ ಒಂದು ಗೋಡೆಪತ್ರಿಕೆ ಮಾಡಿ.

ಒಂದು ವೇಳೆ ನಿಮಗೆ ಕ್ಯಾಮೆರಾ ಮತ್ತು ಪ್ರಿಂಟರ್ ಲಭ್ಯವಿದ್ದಲ್ಲಿ, ಪರಿಸರದ ಬರವಣಿಗೆಯ ಛಾಯಾ ಚಿತ್ರಗಳನ್ನು ತೆಗೆದು, ಮುದ್ರಿಸಿ, ಪ್ರದರ್ಶನಕ್ಕೆ ಅಥವಾ ವಿತರಣೆಗೆ ಬಳಸಬಹುದು.

**ಚಿಂತನೆಗೊಂದು ಕ್ಷಣ**

- ನಿಮ್ಮ ವಿದ್ಯಾರ್ಥಿಗಳನ್ನು ಮೌಲ್ಯಾಂಕನ ಮಾಡಲು ಈ ಚಟುವಟಿಕೆಯನ್ನು ನೀವು ಉಪಯೋಗಿಸಬಹುದೇ?
- ಹೆಚ್ಚಿನ ಸಾಮರ್ಥ್ಯದ ವಿದ್ಯಾರ್ಥಿಗಳಿಗೆ ಈ ಚಟುವಟಿಕೆಯನ್ನು ಹೇಗೆ ಮಾರ್ಪಡಿಸಬಹುದು?

## 2 ತರಗತಿಯಲ್ಲಿನ ಬರವಣಿಗೆಯ ಉದಾಹರಣೆಗಳು

ನಿಮ್ಮ ವಿದ್ಯಾರ್ಥಿಗಳು ಓದಲು ತರಗತಿಯ ಬರವಣಿಗೆಯ ಹಲವು ಉದಾಹರಣೆಗಳನ್ನು ಒಳಗೊಂಡಿರಬಹುದು. ಈ ಬರವಣಿಗೆ ಕಪ್ಪು ಹಲಗೆ, ಪ್ರಕಟಣಾ ಫಲಕ, ಚಾರ್ಟ್, ಭಿತ್ತಿಪತ್ರಗಳ ಮೇಲೆ ಹಾಗೂ ವಿದ್ಯಾರ್ಥಿಗಳ ಕಾರ್ಯದ ಪ್ರದರ್ಶನಗಳಲ್ಲಿರಬಹುದು.

## ಪ್ರಸಂಗ ಅಧ್ಯಯನ 1: ತರಗತಿಯಲ್ಲಿನ ಬರವಣಿಗೆಯಿಂದ ಕಲಿಕೆ

*ಶೃತಿ, ಒಂದನೇ ತರಗತಿಯ ಶಿಕ್ಷಕಿ. ತಮ್ಮ ವಿದ್ಯಾರ್ಥಿಗಳಿಗಾಗಿ ಬರವಣಿಗೆ-ಸಮೃದ್ಧ ತರಗತಿಯನ್ನು ಸೃಷ್ಟಿಸುವುದರ ಕುರಿತ ತಮ್ಮ ಮಾರ್ಗವನ್ನು ಇಲ್ಲಿ ಹಂಚಿಕೊಂಡಿದ್ದಾರೆ.*

ತರಗತಿಯಲ್ಲಿ ಆಲಿಸಲು ಮತ್ತು ಮಾತನಾಡಲು ನನ್ನ ವಿದ್ಯಾರ್ಥಿಗಳಿಗೆ ಹಲವು ಅವಕಾಶಗಳು ಅಗತ್ಯ ಎಂಬುದು ನನಗೆ ಗೊತ್ತು. ಬಹುತೇಕರಿಗೆ ಓದಲು-ಬರೆಯಲು ಗೊತ್ತಿಲ್ಲದಿದ್ದರೂ ಕೂಡ, ಕೈ-ಬರಹದ ಅಥವಾ ಮುದ್ರಿತ ಬರವಣಿಗೆಯ ಲೇಖನ/ ಬರಹವನ್ನು ಒದಗಿಸುವುದು ಮುಖ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ವರ್ಣಮಾಲೆ ಮತ್ತು ಪದಗಳ ಚಾರ್ಟ್ ನಂತಹ ಬಣ್ಣಬಣ್ಣದ ಪೋಸ್ಟರ್ ಗಳ ಸಣ್ಣ ಸಂಗ್ರಹ ನನ್ನ ಬಳಿ ಇದೆ. ಇವುಗಳನ್ನು ನಾನು ವಿದ್ಯಾರ್ಥಿಗಳ ಕಣ್ಣ ಮಟ್ಟದಲ್ಲಿ ಗೋಡೆಗೆ ನೇತುಹಾಕುತ್ತೇನೆ.

ಪ್ರತಿ ಮಗುವಿಗೂ, ಅವರ ಹೆಸರಿನ ಪಟ್ಟಿಯನ್ನು ತಯಾರಿಸಿ, ಅದನ್ನು ಚಿತ್ರಗಳಿಂದ ಅಲಂಕರಿಸುವಂತೆ ಅವರಿಗೆ ಹೇಳುತ್ತೇನೆ. ಇವುಗಳನ್ನು ಮಕ್ಕಳು ಬ್ಯಾಗ್ ಮತ್ತು ಓಟದ ಡಬ್ಬಿಗಳನ್ನು ಇಡುವ ಸ್ಥಳದಲ್ಲಿ ಅಂಟಿಸುತ್ತೇನೆ. ಅಲ್ಲದೆ, ಕಾರ್ಡ್ ಬೋರ್ಡಿನಿಂದ ಮಡಿಚಿ ಮಾಡಿದ 'ಹೆಸರಿನ ಕಾರ್ಡ್'ಗಳು ಇವೆ. ಅವುಗಳನ್ನು ನಿರ್ದಿಷ್ಟ ಚಟುವಟಿಕೆಗಳಿಗೆ ಜೋಡಿಯಲ್ಲಿ ಅಥವಾ ಸಣ್ಣ ಗುಂಪುಗಳಲ್ಲಿ ಕೂರಿಸುವಾಗ ಉಪಯೋಗಿಸುತ್ತೇನೆ. ಈ ಪಟ್ಟಿ/ಕಾರ್ಡ್ ಗಳಲ್ಲಿ ತಮ್ಮ ಹೆಸರನ್ನು ಮತ್ತು ಸಹಪಾಠಿಗಳ ಹೆಸರುಗಳನ್ನು ಗುರುತಿಸಲು ನನ್ನ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿದೆ.

ಬಣ್ಣದ ಕಾಗದಗಳನ್ನು ಬಳಸಿ ತರಗತಿಯಲ್ಲಿರುವುದಕ್ಕೆ 'ಹೆಸರಿನ ಚೀಟಿ'ಗಳನ್ನು ತಯಾರಿಸುತ್ತೇನೆ. ಉದಾಹರಣೆ-. 'ಬಾಗಿಲು', 'ಕಿಟಕಿ', 'ಕಪ್ಪುಹಲಗೆ', 'ಕಪಾಟು', 'ಮೇಜು', 'ಕುರ್ಚಿ', 'ಡೆಸ್ಕ್' ಮತ್ತು 'ಗಡಿಯಾರ' ಇತ್ಯಾದಿ.

ಪ್ರತಿ ವಸ್ತುವಿನ ಮೇಲೆ ಸರಿಯಾದ ಚೀಟಿಯನ್ನು ಅಂಟಿಸಲು ಸಹಾಯ ಮಾಡುವಂತೆ ನನ್ನ ವಿದ್ಯಾರ್ಥಿಗಳಿಗೆ ಹೇಳುತ್ತೇನೆ. ಗುಣಿತಾಕ್ಷರಗಳ ಉಚ್ಚಾರದ ಮೇಲೆ ಗಮನ ನೀಡಿ, ಮೊದಲಿಗೆ ಪದವನ್ನು ನಾನು ಓದುತ್ತೇನೆ. ಆಗ ವಿದ್ಯಾರ್ಥಿಗಳು ಆ ಚೀಟಿಯನ್ನು ಎಲ್ಲಿ ಅಂಟಿಸಬೇಕೆಂದು ತೋರಿಸುತ್ತಾರೆ. ಕೆಲವೊಮ್ಮೆ ವಿದ್ಯಾರ್ಥಿಗಳು ತರಗತಿಯ ಇತರ ವಸ್ತುವಿಗೂ ಚೀಟಿ ಅಂಟಿಸಬೇಕೆಂದು ಸಲಹೆ ನೀಡುತ್ತಾರೆ. ಇಂತಹ ಸಂದರ್ಭಗಳಲ್ಲಿ, ಅವರ ಸಲಹೆಯ ವಸ್ತುವಿನ ಪದಗಳನ್ನು ಬರೆಯುವಾಗ ಪ್ರತಿ ಅಕ್ಷರವನ್ನೂ ಓದಿಹೇಳುತ್ತೇನೆ.

ತರಗತಿಯ ಒಂದು ಭಾಗದಲ್ಲಿ, 'ಪದ ಗೋಡೆ' (word wall)ಯನ್ನು ಸೃಷ್ಟಿಸಿದ್ದೇನೆ. ಒಂದು ವಾರದಲ್ಲಿ ವಿದ್ಯಾರ್ಥಿಗಳು ಕಲಿತ ಹೊಸಪದಗಳನ್ನು ಇಲ್ಲಿ ಹಾಕುತ್ತೇನೆ. ಅಲ್ಲದೆ, ಈ ಪದಗಳನ್ನು ತಾವೇ ಬರೆಯುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುತ್ತೇನೆ.



**ಚಿತ್ರ 2** ಭಾಷಾ - ಸಮೃದ್ಧ ತರಗತಿಯ ಉದಾಹರಣೆ

**ಚಿಂತನೆಗೊಂದು ಕ್ಷಣ**

- ಶೃತಿಯವರ ವಿಚಾರಗಳು ಅವರ ವಿದ್ಯಾರ್ಥಿಗಳ ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆಗೆ ಯಾವ ರೀತಿಯಲ್ಲಿ ಸಹಾಯಕವಾಗುತ್ತವೆ?
- ನಿಮ್ಮ ತರಗತಿಗೆ ಅವರ ಯಾವ ಯಾವ ವಿಚಾರಗಳನ್ನು ಬಳಸಿಕೊಳ್ಳುತ್ತೀರಿ?

### ಚಟುವಟಿಕೆ 2: ಬರವಣಿಗೆ - ಸಮೃದ್ಧ ತರಗತಿಯ ಸೃಷ್ಟಿಸುವಿಕೆ

ನಿಮ್ಮ ತರಗತಿಯಲ್ಲಿ ಈಗ ಸಧ್ಯಕ್ಕೆ ಇರುವ ಬರವಣಿಗೆಗಳನ್ನು ಗಮನಿಸಲು 15 ನಿಮಿಷಗಳನ್ನು ತೆಗೆದಿಡಿ:

- ಇದು ಯಾವ ರೂಪ ಪಡೆದಿದೆ?
- ನಿಮ್ಮ ವಿದ್ಯಾರ್ಥಿಗಳಿಗೆ ಇದು ಉತ್ತೇಜಕವಾಗಿದೆಯೇ? ಇದು ಅವರ ಕಲಿಕೆಗೆ ಹೇಗೆ ಸಹಾಯಕವಾಗಿದೆ?
- ಇದನ್ನು ಎಷ್ಟು ಸಲ, ಯಾವಾಗ ಬದಲಿಸಲಾಗಿದೆ?
- ಇದು ನಿಮ್ಮ ವಿದ್ಯಾರ್ಥಿಗಳ ಕಾರ್ಯವನ್ನು ಒಳಗೊಂಡಿರುವುದಾದರೆ, ಪ್ರದರ್ಶಿತವಾಗಿರುವುದರ ಆಯ್ಕೆಯು ಎಷ್ಟರ ಮಟ್ಟಿಗೆ ಒಳಗೊಳ್ಳುವಿಕೆಯಿಂದ ಕೂಡಿದೆ?

ನಿಮ್ಮ ಇಬ್ಬರು ಸಹೋದ್ಯೋಗಿಗಳೊಂದಿಗೆ ಮಾತನಾಡಿ. ಅವರ ತರಗತಿಗೋಡೆಗಳ ಮೇಲೆ ಯಾವ ಬರವಣಿಗೆಯ ಉದಾಹರಣೆಗಳು ಕಾಣುತ್ತವೆ?

ನಿಮ್ಮ ತರಗತಿಯಲ್ಲಿ ಪ್ರದರ್ಶಿಸುವ ವಿದ್ಯಾರ್ಥಿ ಕಾರ್ಯ ಮತ್ತು ವೈವಿಧ್ಯತೆಯನ್ನು ಹೇಗೆ ಹೆಚ್ಚಿಸುವಿರಿ? ನಿಮ್ಮ ವಿದ್ಯಾರ್ಥಿಗಳ ವಯಸ್ಸು, ಆಸಕ್ತಿಗನುಗುಣವಾಗಿ ಅವರಿಗೆ ಓದುವ ಸಾಮಗ್ರಿಯನ್ನು ಒದಗಿಸಲು ನಿಮ್ಮ ಬರವಣಿಗೆಯನ್ನು ಕಲ್ಪನಾತ್ಮಕವಾಗಿ ಹೇಗೆ ಬಳಸಿಕೊಳ್ಳುವಿರಿ? ನಿಮ್ಮ ತರಗತಿಯ ಗೋಡೆ ಜಾಗದ ಯೋಜನೆಯನ್ನು ತಯಾರಿಸಿ, ಹೆಚ್ಚು ಪರಿಣಾಮಕಾರಿಯಾಗಿ ಅದನ್ನು ಹೇಗೆ ಬಳಸಿಕೊಳ್ಳುತ್ತೀರಿ? ಸಾಧ್ಯವಾದಲ್ಲಿ, ಹದಿನೈದು ದಿನಗಳಿಗೊಮ್ಮೆ ತರಗತಿಯ ಕೆಲವು ಪ್ರದರ್ಶನಗಳನ್ನು ಬದಲಾಯಿಸಲು ಅಥವಾ ಸೇರಿಸಲು ನಿಮ್ಮಷ್ಟಕ್ಕೆ ನೀವೇ ಬದ್ಧರಾಗಿರಿ. ನಿಮ್ಮ ಸಹೋದ್ಯೋಗಿಗಳನ್ನು ಹಾಗೇ ಮಾಡುವಂತೆ ಪ್ರೋತ್ಸಾಹಿಸಿ. ಪರಸ್ಪರರ ತರಗತಿಗಳಿಗೆ ಭೇಟಿಕೊಟ್ಟು, ಅಲ್ಲಿನ ಗೋಡೆ ಪ್ರದರ್ಶನಗಳಿಂದ ಕಲಿಯಿರಿ.

## 3 ತರಗತಿಯ ಓದುವ ಮೂಲೆ

ನಿಮ್ಮ ತರಗತಿಯಲ್ಲಿ ಓದುವ ಮೂಲೆಯನ್ನು ಸ್ಥಾಪಿಸುವುದರಿಂದ ವಿದ್ಯಾರ್ಥಿಗಳು ಸ್ವತಃ ಪುಸ್ತಕಗಳನ್ನು ಹಿಡಿದು, ಓದಲು ವಿಶೇಷ ಸ್ಥಳವನ್ನು ಒದಗಿಸಿಕೊಟ್ಟಂತಾಗುತ್ತದೆ.

ತರಗತಿ ಓದುವ ಮೂಲೆಯ ವಿನ್ಯಾಸ ಮತ್ತು ಸಂಪನ್ಮೂಲ ಸಂಗ್ರಹದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು ಅತಿ ಮುಖ್ಯ. ಈ ಮೂಲಕ ಅವರು ಅದನ್ನು ಬಳಸಿ, ಉತ್ತಮಪಡಿಸಲು ನಿರತರಾಗುತ್ತಾರೆ.



**ಚಿತ್ರ 3** ತರಗತಿಯ ಓದುವ ಮೂಲೆ

## ಪ್ರಸಂಗ ಅಧ್ಯಯನ 2: ತರಗತಿ ಓದುವ ಮೂಲೆಗೆ ಸಂಪನ್ಮೂಲ ಸಂಗ್ರಹ

*ಚಾಮರಾಜನಗರದ ಒಂದು ಪ್ರಾಥಮಿಕ ಶಾಲೆಯಲ್ಲಿ ದಿನೇಶ್ ಮೂರನೇ ತರಗತಿಯ ಶಿಕ್ಷಕರಾಗಿದ್ದಾರೆ. ಇಲ್ಲಿ ಅವರು ತಮ್ಮ ತರಗತಿಯ ಓದುವ ಮೂಲೆಗಾಗಿ ಹೇಗೆ ಪುಸ್ತಕಗಳನ್ನು ಸಂಗ್ರಹಿಸಿದರು ಎಂಬುದನ್ನು ವಿವರಿಸಿದ್ದಾರೆ.*

ಚಿಕ್ಕವಯಸ್ಸಿನಿಂದಲೇ ಪುಸ್ತಕಗಳ ಜೊತೆಗಿನ ಒಡನಾಟ ಹೊಂದುವ ಅವಕಾಶ ಪಡೆಯುವುದು ಎಷ್ಟು ಮುಖ್ಯ ಎಂಬುದು ನನಗೆ ಗೊತ್ತು. ನನ್ನ ವಿದ್ಯಾರ್ಥಿಗಳು ಪಠ್ಯಪುಸ್ತಕಗಳಿಂದ ಖುಷಿಗೊಂಡಿದ್ದರೂ, ಅವರ ಹೆಚ್ಚಿನ ಓದು ಮತ್ತು ಆನಂದದ ಓದಿಗಾಗಿ ಇತರ ಸಾಮಗ್ರಿಗಳನ್ನು ನಾನು ಅವರಿಗೆ ಒದಗಿಸಬೇಕಿತ್ತು. ಆದರೆ ಹೊಸ ಪುಸ್ತಕಗಳನ್ನು ಖರೀದಿಸಲು ಹಣಕಾಸು ಸರಬರಾಜು ಸೀಮಿತವಾಗಿತ್ತು.

ಬೆಳೆದು ದೊಡ್ಡವರಾದ ಮಕ್ಕಳಿರುವ ಸಂಬಂಧಿಗಳು ಮತ್ತು ಸ್ನೇಹಿತರನ್ನು ಭೇಟಿ ಮಾಡಿ, ಅವರ ಮಕ್ಕಳು ಓದಿ ಮುಗಿಸಿದ ಪುಸ್ತಕಗಳನ್ನು ಈಗ ಅವರಿಗೆ ಬೇಕಾಗಿಲ್ಲದಿದ್ದಲ್ಲಿ ನನಗೆ ಕೊಡುವಂತೆ ಹೇಳಿದೆ. ನನಗೆ ತಿಳಿದ ಕೆಲವು ಶೈಕ್ಷಣಿಕ ದತ್ತಿ ಸಂಸ್ಥೆಗಳಿಗೆ ಪತ್ರ ಬರೆದು, ಸಹಾಯ ನೀಡುವಂತೆ ಕೇಳಿದೆ. ಕೊನೆಗೆ, ಕೆಲವು ಪುಸ್ತಕಗಳನ್ನು ಖರೀದಿಸಲು ನಾನು ನನ್ನ ವಾರ್ಷಿಕ ಟಿಎಲ್ಎಂ (ಬೋಧನಾ-ಕಲಿಕಾ ಸಾಮಗ್ರಿ) ವಿಶೇಷ ಭತ್ಯೆಯನ್ನು ಉಪಯೋಗಿಸಿದೆ.

ಓದುವ ಮೂಲೆಯನ್ನು ನಾನು ಕೇವಲ ಹತ್ತು ಪುಸ್ತಕಗಳೊಂದಿಗೆ ಪ್ರಾರಂಭಿಸಿದೆ. ಎರಡು ವರ್ಷಗಳ ನಂತರ, ಬೇರೆ ಬೇರೆ ಹಂತಗಳಿಗೆ ಸೂಕ್ತವಾದ ಸುಮಾರು 60 ಕಾದಂಬರಿ ಮತ್ತು ಕಾದಂಬರಿಯೇತರ ಪುಸ್ತಕಗಳ ಸಂಗ್ರಹ ಮಾಡಿದೆ. ಅಲ್ಲದೆ ವಿವಿಧ ಬಗೆಯ ಮ್ಯಾಗ್ ಜಿನ್ ಮತ್ತು ಸುದ್ದಿಪತ್ರಿಕೆಗಳಿವೆ. ಈಗ ನಾನು ಶಾಲೆಯ ಇತರ ಶಿಕ್ಷಕರೊಂದಿಗೂ ಇವುಗಳನ್ನು ಹಂಚಿಕೊಳ್ಳುತ್ತೇನೆ.

## ಚಟುವಟಿಕೆ 3: ನಿಮ್ಮ ತರಗತಿಯಲ್ಲಿ ಓದುವ ಮೂಲೆಯ ಸಂಯೋಜನೆ

ಸಾಧ್ಯವಾದಲ್ಲಿ, ನಿಮ್ಮ ಸಹೋದ್ಯೋಗಿಯೊಬ್ಬರೊಂದಿಗೆ ಸೇರಿ, ಮನಸ್ಸಿಗೆ ಬರುವ ಎಲ್ಲಾ ಹೊಳಹುಗಳನ್ನು ಪಟ್ಟಿ ಮಾಡುತ್ತಾ, ತರಗತಿಯಲ್ಲಿ ಒಂದು ಓದುವ ಮೂಲೆಗಾಗಿ ಯೋಜನೆ ತಯಾರಿಸಿ. ತಯಾರಿಸುವಾಗ ಇವುಗಳನ್ನು ಪರಿಗಣಿಸಿ:

- ಸೂಕ್ತ ಪುಸ್ತಕ ಮತ್ತು ಇತರ ಓದುವ ಸಾಮಗ್ರಿಗಳು ನಿಮಗೆ ಲಭ್ಯವಾಗುವ ಮೂಲಗಳು ಯಾವುವು?
- ಸಾಮಗ್ರಿಗಳ ಸರಬರಾಜಿಗೆ ಯಾವ ರೀತಿಯಲ್ಲಿ ನಿಮ್ಮ ವಿದ್ಯಾರ್ಥಿಗಳು ಸಹಾಯಕವಾಗಬಹುದು? (ಉದಾಹರಣೆಗೆ, ತಾವೇ ಪುಸ್ತಕಗಳನ್ನು ತಯಾರಿಸುವ ಮೂಲಕ)?
- ನಿಮ್ಮ ತರಗತಿಯಲ್ಲಿ ಓದುವ ಮೂಲೆಯನ್ನು ಎಲ್ಲಿ ಸ್ಥಾಪಿಸುತ್ತೀರಿ?

- ಅದನ್ನು ಸ್ಥಾಪಿಸಲು ನಿಮಗೆ ಏನೇನು ಬೇಕು? (ಉದಾಹರಣೆಗೆ, ಪುಸ್ತಕಗಳನ್ನು ಇಡಲು ಪೆಟ್ಟಿಗೆಗಳು, ಕುಳಿತುಕೊಳ್ಳಲು ಚಾಪೆ ಇತ್ಯಾದಿ)? ಈ ವಸ್ತುಗಳನ್ನು ಎಲ್ಲಿಂದ ತರುವಿರಿ?
- ನಿಮ್ಮ ತರಗತಿ ಚಟುವಟಿಕೆಗಳಿಗೆ ಈ ಓದುವ ಮೂಲೆಯ ಬಳಕೆಯನ್ನು ಹೇಗೆ ಸೇರಿಸಿಕೊಳ್ಳುತ್ತೀರಿ?

ನಿಮ್ಮ ತರಗತಿಯಲ್ಲಿ ಓದುವ ಮೂಲೆಯನ್ನು ಪರಿಚಯಿಸಲು ನಿಮಗೆ ಸಹಾಯವಾಗುವಂತೆ ಕೆಲವು ಉಪಯುಕ್ತ ವಿಚಾರಗಳನ್ನು ಸಂಪನ್ಮೂಲ 1 ಒದಗಿಸುತ್ತದೆ.

## 4 ತರಗತಿ ಸಂಪನ್ಮೂಲವಾಗಿ ರೇಡಿಯೋ

### ಪ್ರಸಂಗ ಅಧ್ಯಯನ 3: ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆಗಾಗಿ ರೇಡಿಯೋ ಬಳಕೆ

*ಬೀದರ್ ಬಳಿಯ ಒಂದು ಹಳ್ಳಿಯ ಶಾಲೆಯಲ್ಲಿ ರೇಖಾ ಬಹುವರ್ಗ ಬೋಧನಾ ಶಿಕ್ಷಕಿಯಾಗಿದ್ದಾರೆ. ಇಲ್ಲಿ ಅವರು ತಮ್ಮ ಭಾಷಾ ಪಾಠಗಳಲ್ಲಿ ಹೇಗೆ ರೇಡಿಯೋವನ್ನು ಸಂಪನ್ಮೂಲವಾಗಿ ಬಳಸುತ್ತಾರೆ ಎಂಬುದನ್ನು ವಿವರಿಸಿದ್ದಾರೆ.*

ನನ್ನ ಶಾಲೆಯಲ್ಲಿ ಪಠ್ಯ ಪುಸ್ತಕಗಳ ಹೊರತಾಗಿ ಇತರ ಸಂಪನ್ಮೂಲಗಳು ಅಷ್ಟಾಗಿ ಇಲ್ಲ. ನನ್ನ ಬಿಡುವಿನ ವೇಳೆಯಲ್ಲಿ ಬಹಳ ಹೊತ್ತು ನಾನು ರೇಡಿಯೋ ಕೇಳುತ್ತೇನೆ, ಹಾಗೂ ಹಲವು ಬಗೆಯ ಆಸಕ್ತಿದಾಯಕ ಕಾರ್ಯಕ್ರಮಗಳಿರುವುದನ್ನು ನಾನು ಕಂಡುಕೊಂಡಿದ್ದೇನೆ. ಈಗ ನಾನು ನಿರಂತರವಾಗಿ ನನ್ನ ಭಾಷಾ ಪಾಠಗಳಲ್ಲಿ ಹೆಚ್ಚಿನ ಸಂಪನ್ಮೂಲವಾಗಿ ರೇಡಿಯೋವನ್ನು ಬಳಕೆ ಮಾಡುತ್ತೇನೆ. ಅದು ತರಗತಿಯ ಆಚೆಗಿನ  ಪ್ರಪಂಚವನ್ನು ತೆರೆದಿಡುವ ರೀತಿ ನನಗೆ ಮೆಚ್ಚುಗೆಯಾಗುತ್ತದೆ.

ತರಗತಿಗೆ ಸೂಕ್ತವಾದ ರೇಡಿಯೋ ಕಾರ್ಯಕ್ರಮದ ವೇಳೆಯನ್ನು ಮುಂಚಿತವಾಗಿಯೇ ಗುರುತಿಟ್ಟುಕೊಳ್ಳುತ್ತೇನೆ , ಮುಂಚೆ ನಾನು ತರಗತಿಯಲ್ಲಿ ಕಾರ್ಯಕ್ರಮಗಳನ್ನು ನೇರವಾಗಿ ಅದು ಪ್ರಸಾರವಾಗುವ ಸಮಯದಲ್ಲಿಯೇ ಹಾಕುತ್ತಿದ್ದೆ. ಅದಕ್ಕಾಗಿ ಸಮಯ ಸೂಕ್ತವಾಗಿರುವಂತೆ ನೋಡಿಕೊಳ್ಳಬೇಕಿತ್ತು. ಆದರೆ ಈಗ ಇರುವ ರೇಡಿಯೋದಲ್ಲಿ ರೆಕಾರ್ಡಿಂಗ್ ಸೌಲಭ್ಯವಿದೆ. ಆದ್ದರಿಂದ ಮುಂಚಿತವಾಗಿಯೇ ಆಯ್ದುಕೊಂಡು, ಆಮೇಲೆ ಕೇಳಿಸಬಹುದು.

ವಿಶೇಷವಾಗಿ ತಯಾರಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ನನ್ನ ವಿದ್ಯಾರ್ಥಿಗಳಿಗೆ ಆಗಾಗ್ಗೆ ಕೇಳಿಸುತ್ತೇನೆ. ಏಕೆಂದರೆ ಇವುಗಳನ್ನು ಸ್ಪಷ್ಟವಾಗಿ ಪ್ರಸ್ತುತಪಡಿಸಲಾಗುತ್ತದೆಯಲ್ಲದೆ, ಒಂದು ಅಥವಾ ಎರಡು ಚಿಕ್ಕ ಅರ್ಥಗ್ರಹಿಕೆಯ ಕಾರ್ಯಗಳು ಅಥವಾ ಇತರ ಚಟುವಟಿಕೆಗಳು ಇರುತ್ತವೆ. ಆ ನಂತರ ನಾವು ಕಾರ್ಯಕ್ರಮದ ವಿಷಯದ ಕುರಿತು ಮಾತನಾಡಲು ಸಮಯ ಮೀಸಲಿಡುತ್ತೇವೆ. ಅರ್ಥವಾಗದ್ದನ್ನು ಸ್ಪಷ್ಟವಾಗಿ ಅರ್ಥಮಾಡಿಸಲು ಇದು ಸಹಾಯಕ. ಕೆಲವೊಮ್ಮೆ ಇದನ್ನು ಇಡೀ ತರಗತಿಯಲ್ಲಿ, ಕೆಲವೊಮ್ಮೆ ಗುಂಪಿನಲ್ಲಿ ಮಾಡಿಸುತ್ತೇನೆ. ಆ ನಂತರ ನಾನು ಸಾಮಾನ್ಯವಾಗಿ ಕಾರ್ಯಕ್ರಮದ ವಿಷಯದ ಕುರಿತು ಕಿರಿಯ ವಿದ್ಯಾರ್ಥಿಗಳನ್ನು ಚಿಕ್ಕದಾಗಿ  ವರದಿ ಬರೆಯುವಂತೆ ಹೇಳುತ್ತೇನೆ ಮತ್ತು ದೊಡ್ಡ ಮಕ್ಕಳಿಗೆ ವಿವರವಾದ ವರದಿ ಬರೆಯುವಂತೆ ಹೇಳುತ್ತೇನೆ.

ತರಗತಿಯಲ್ಲಿ ನಾನು ಕಥೆಗಳು, ನಾಟಕಗಳು ಮತ್ತು ಸಿನಿಮಾ ತುಣುಕುಗಳನ್ನು ಕೇಳಿಸುತ್ತೇನೆ. ಇವುಗಳು ಪಾತ್ರಗಳ ಕುರಿತ ಚರ್ಚೆಗೆ, ವಿಷಯಕ್ಕೆ ಅಥವಾ ಮುಂದೇನಾಗಬಹುದು ಎನ್ನುವುದರ ಕುರಿತು ಊಹನೆಗೆ ಎಡೆ ಮಾಡಿಕೊಡುತ್ತವೆ. ಕೆಲವೊಮ್ಮೆ ನಾನು ಸಂಭಾಷಣೆಗಳನ್ನು ತಮ್ಮ ಪದಗಳಲ್ಲಿ ಬರೆದು, ಪಾತ್ರಾಭಿನಯ ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳುತ್ತೇನೆ.

ರೇಡಿಯೋ ಕಾರ್ಯಕ್ರಮಗಳು ನನ್ನ ವಿದ್ಯಾರ್ಥಿಗಳಿಗೆ ವಿವಿಧ ಧ್ವನಿಗಳು, ಹೊಸ ಅಭಿವ್ಯಕ್ತಿ ಪದ/ಪದಗುಚ್ಛಗಳು ಮತ್ತು ಭಾಷೆಯ ವಿವಿಧ ರೂಪಗಳನ್ನು ತೆರೆದಿಡುವ ರೀತಿ ನನಗಿಷ್ಟ. ಕಾರ್ಯಕ್ರಮದ ಅವಧಿಯಲ್ಲಿ, ಅಪರಿಚಿತವೆನಿಸುವ ಪದಗಳನ್ನು ಪಟ್ಟಿ ಮಾಡಿಕೊಂಡು, ಆ ನಂತರ ವಿದ್ಯಾರ್ಥಿಗಳಿಂದ ಅರ್ಥವೇನೆಂದು ತಿಳಿದಿದ್ದರೆ ಹೇಳಲು ಅಥವಾ ಊಹಿಸಬಹುದೆಂದು ಹೇಳುತ್ತೇನೆ. ಕೆಲವೊಮ್ಮೆ ಪ್ರಸ್ತುತ ಪಡಿಸಿದವರು ಉಚ್ಚರಿಸಿದ ಪದವನ್ನು/ಪದಗುಚ್ಛಗಳನ್ನು ಹಾಗೇ ಏಕೆ ಉಚ್ಚರಿಸಿದರು, ಬೇರೆ ರೀತಿಯಲ್ಲಿ ಬಳಸಬಹುದಿತ್ತಲ್ಲ ಎಂದು ವಿದ್ಯಾರ್ಥಿಗಳು ತಾವು ಕೇಳಿಸಿಕೊಂಡ ಭಾಷೆಯ ಕುರಿತು ಚರ್ಚಿಸುತ್ತಾರೆ. ಈ ರೀತಿ ವ್ಯತ್ಯಾಸಗಳನ್ನು ಚರ್ಚಿಸುವುದರಿಂದ ಭಾಷೆಯ ಶ್ರೀಮಂತಿಕೆ ಮತ್ತು ವೈವಿಧ್ಯತೆಯ ತಿಳುವಳಿಕೆ ಹೆಚ್ಚುತ್ತದೆ.

ಅಲ್ಲದೆ ನಾನು ವಿದ್ಯಾರ್ಥಿಗಳ ಮನೆ ಭಾಷೆಯಲ್ಲಿನ ಕಾರ್ಯಕ್ರಮದ ಸಣ್ಣ ಭಾಗವನ್ನು ಕೂಡ ಕೇಳಿಸುವ ಪ್ರಯೋಗ ಮಾಡಿದೆ.

ಅರ್ಥವಾದವರು ಅರ್ಥವಾಗದವರಿಗೆ ವಿವರಿಸುವಂತೆ ಹೇಳಿದೆ. ನಂತರ ಅಲ್ಲಿನ ಮಾತುಗಾರರು ಬಳಸಿದ ಎರಡು-ಮೂರು ಮುಖ್ಯ ಪದಗಳನ್ನು ಹೇಳಿಸಿ ಇತರರು ಅದನ್ನು ಪುನರುಚ್ಚರಿಸುವಂತೆ ಹೇಳಿದೆ. ಕಪ್ಪು ಹಲಗೆಯ ಮೇಲೆ ಅದನ್ನು ಅವರು ಬರೆದರು, ಇತರರು ತಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಂಡರು. ಈ ಪಾಠದಲ್ಲಿ ಪ್ರತಿಯೊಬ್ಬರೂ ಮಗ್ನರಾಗಿ ಹೋಗಿದ್ದರು.

ನನ್ನ ವಿದ್ಯಾರ್ಥಿಗಳಿಗಾಗಿ ಬಳಸುವ ರೇಡಿಯೋ ಪ್ರಸಾರಗಳು ಯಾವಾಗಲೂ ನನ್ನನ್ನೇ ಕೇಳಿಸಿಕೊಳ್ಳುವುದಕ್ಕೆ ಪೂರಕವಾಗಿರುತ್ತದೆ.

**ಚಿಂತನೆಗೊಂದು ಕ್ಷಣ**

- ರೇಖಾರವರ ರೇಡಿಯೋ - ಆಧಾರಿತ ಪಾಠಗಳು ಯಾವ ರೀತಿಯ ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆ ಅವಕಾಶಗಳನ್ನು ಅವರ ವಿದ್ಯಾರ್ಥಿಗಳಿಗೆ ಒದಗಿಸುತ್ತವೆ?
- ತರಗತಿಯಲ್ಲಿ ರೇಡಿಯೋ ಬಳಸಲು ಏನಾದರೂ ಸವಾಲುಗಳು ನಿಮಗೆ ಎದುರಾಗುತ್ತವೆಯೇ? ಅವುಗಳನ್ನು ನೀವು ಹೇಗೆ ನಿಭಾಯಿಸುತ್ತೀರಿ?

ತರಗತಿಯಲ್ಲಿ ವಿದ್ಯಾರ್ಥಿಗಳ ಮನೆ ಭಾಷೆಯನ್ನು ಗೌರವಿಸುವ  ಮೂಲಕ  ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಕುರಿತು ಹೆಚ್ಚಿನ ವಿಚಾರಗಳು ಪ್ರಮುಖ ಸಂಪನ್ಮೂಲ, “ಎಲ್ಲರ ಒಳಗೊಳ್ಳುವಿಕೆ’ ಯಲ್ಲಿದೆ.

**Video: Involving all**

## ಚಟುವಟಿಕೆ 4: ನಿಮ್ಮ ತರಗತಿಯಲ್ಲಿ ರೇಡಿಯೋ ಬಳಕೆ

ತರಗತಿಯಲ್ಲಿ ರೇಡಿಯೋ ಕಾರ್ಯಕ್ರಮಗಳನ್ನು ಬಳಸುವ ಮೊದಲು, ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆಗಾಗಿ ಅವುಗಳನ್ನು ಅಭ್ಯಾಸಮಾಡುವುದು ಪ್ರಯೋಜನಕಾರಿ.



**ಚಿತ್ರ 4** ತರಗತಿಯಲ್ಲಿ ರೇಡಿಯೋ ಕೇಳುತ್ತಿರುವುದು

ಒಂದು ವಾರದ ಅವಧಿಯಲ್ಲಿ, ನಿಮ್ಮ ವಿದ್ಯಾರ್ಥಿಗಳಿಗೆ ಸೂಕ್ತವೆನಿಸುವ ಎರಡು - ಮೂರು ರೇಡಿಯೋ ಕಾರ್ಯಕ್ರಮಗಳನ್ನು ಕೇಳಲು ಸಮಯ ಮಾಡಿಕೊಳ್ಳಿ. ನೀವು ಕೇಳಿಸಿಕೊಳ್ಳುತ್ತಿದ್ದಂತೆ ಈ ಪ್ರಸಾರದಿಂದ ನಿಮ್ಮ ವಿದ್ಯಾರ್ಥಿಗಳು ಏನನ್ನು ಗಳಿಸಬೇಕು ಎಂಬುದನ್ನು ಮತ್ತು ಕೆಳಗಿರುವ ಅಂಶಗಳ ನೆಲೆಯಲ್ಲಿ ಇವು ಹೇಗೆ ಸಹಾಯಕಾರಿಯಾಗಬಹುದು ಎಂದು ಆಲೋಚಿಸಿ.

- ಅದರ ವಿಷಯಾಂಶಗಳು
- ಅವರ ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆ

ಆಮೇಲೆ, ತರಗತಿಯಲ್ಲಿ ನಡೆಯಬಹುದಾದನ್ನು ಕಲ್ಪಿಸಿಕೊಂಡು, ಅವರ ವಿಷಯ ಜ್ಞಾನ ಹಾಗೂ ಭಾಷೆ ಮತ್ತು ಸಾಕ್ಷರತೆ ಮಟ್ಟಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸಾರದ ನಂತರ ಕೇಳಬೇಕಾದ ಪ್ರಶ್ನೆಗಳು ಮತ್ತು ಚರ್ಚಾಂಶಗಳನ್ನು ತಾಲೀಮು ಮಾಡಿ.

ಪ್ರಸಾರದ ಬಳಿಕ ನಿಮ್ಮ ವಿದ್ಯಾರ್ಥಿಗಳು ಮಾಡಬಹುದಾದ ಒಂದು ಅಥವಾ ಎರಡು ಚಟುವಟಿಕೆಗಳ ಮುಖ್ಯಾಂಶಗಳನ್ನು ಬರೆದುಕೊಳ್ಳಿ. ಇದು ಮಾತನಾಡುವಿಕೆ ಅಥವಾ ಬರವಣಿಗೆ ಅಥವಾ ಎರಡನ್ನೂ ಒಳಗೊಂಡಿರಬಹುದು. ವಿದ್ಯಾರ್ಥಿಗಳನ್ನು ಹೇಗೆ ಸಂಘಟಿಸುತ್ತೀರಿ, ಎಷ್ಟು ಸಮಯ ಬೇಕು ಹಾಗೂ ಕೊನೆಯಲ್ಲಿ ಹೇಗೆ ಸಮಾಪ್ತಿ ಮಾಡುತ್ತೀರಿ ಎಂಬುದರ ಕುರಿತು ಆಲೋಚಿಸಿ.

ಈ ಕೌಶಲವನ್ನು ಕೆಲವು ಬಾರಿ ಅಭ್ಯಾಸ ಮಾಡಿದ ಮೇಲೆ, ನೇರವಾಗಿ ಪ್ರಸಾರವಾಗುವಾಗ ಅಥವಾ ರೆಕಾರ್ಡ್ ಮಾಡಿ, ಪ್ರಸಾರ ಮಾಡಲು ಒಂದು ಸೂಕ್ತ ಕಾರ್ಯಕ್ರಮವನ್ನು ಗುರುತಿಸಿ. ಮುಂಚಿತವಾಗಿ ನಿಮಗೆ ಸಾಧ್ಯವಾದಷ್ಟು ಪಾಠವನ್ನು ಯೋಜಿಸಿ. ಆ ನಂತರ ಪ್ರಯತ್ನಿಸಿ.

**ಚಿಂತನೆಗೊಂದು ಕ್ಷಣ**

- ನೀವು ನಿರೀಕ್ಷಿಸಿದಂತೆ ಪಾಠ ನಡೆಯಿತೇ?
- ಮುಂದಿನ ಬಾರಿ ಯಾವುದನ್ನು ವಿಭಿನ್ನವಾಗಿ ಮಾಡುವಿರಿ?

ಭಾಷಾ - ಸಮೃದ್ಧ ತರಗತಿಯನ್ನು ಸೃಷ್ಟಿಸುವುದರ ಕುರಿತು ಹೆಚ್ಚಿನ ವಿಚಾರಗಳಿಗಾಗಿ, ಸಂಪನ್ಮೂಲ 2 'ಸ್ಥಳೀಯ ಸಂಪನ್ಮೂಲ ಬಳಕೆ' ನೋಡಿ.



**Video: Using local resources**

## ಸಾರಾಂಶ

ಈ ಘಟಕವು ನಿಮ್ಮ ತರಗತಿಯನ್ನು ಹೆಚ್ಚು ಭಾಷಾ-ಸಮೃದ್ಧವಾಗಿಸಲು ಕೆಲವು ಸರಳ, ಮಿತವ್ಯಯಕಾರಿ ವಿಧಾನಗಳನ್ನು ತೋರಿಸಿಕೊಟ್ಟಿದೆ. ಮಾತು ಮತ್ತು ಬರವಣಿಗೆಯ ವಿವಿಧ ಮೂಲಗಳಿಗೆ ನಿಮ್ಮ ವಿದ್ಯಾರ್ಥಿಗಳು ಪರಿಚಿತವಾಗುವಂತೆ ಮಾಡಲು ತರಗತಿಯಲ್ಲಿ ನೀವು ಬಳಸಬಹುದಾದಂತಹ ವಿಚಾರಗಳನ್ನು ಸಲಹೆಮಾಡಿದೆ. ಇವು ಬರವಣಿಗೆ - ಆಧಾರಿತ ಗೋಡೆ ಪ್ರದರ್ಶನಗಳು, ಓದುವ ಮೂಲೆಯ ಸ್ಥಾಪನೆ ಮತ್ತು ತರಗತಿಯಲ್ಲಿ ರೇಡಿಯೋ ಬಳಕೆಯ ಕುರಿತು ಸಲಹೆಗಳನ್ನು ಒಳಗೊಂಡಿವೆ. ಕಾಲಾಂತರದಲ್ಲಿ, ಬೇರೆ ಬೇರೆ ಹಂತದ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕದ ಪಾಠಗಳನ್ನು ಉತ್ತಮಪಡಿಸಲು ಹಾಗೂ ಅವರ ಪರಿಸರದಲ್ಲಿ ಎದುರಾಗುವ ಮಾತು ಮತ್ತು ಬರವಣಿಗೆಯೊಂದಿಗೆ ತೊಡಗಿಸಿಕೊಳ್ಳಲು ಪ್ರೇರಣೆ ನೀಡುವುದಕ್ಕಾಗಿ ಸರಳ ಸಂಪನ್ಮೂಲಗಳು ಮತ್ತು ಚಟುವಟಿಕೆಗಳ ಭಂಡಾರ ಸೃಷ್ಟಿಯಾಗುತ್ತದೆ.

## ಸಂಪನ್ಮೂಲ

### ಸಂಪನ್ಮೂಲ 1: ನಿಮ್ಮ ತರಗತಿಯಲ್ಲಿ ಆಕರ್ಷಕ ಓದುವ ಮೂಲೆಯನ್ನು ಸೃಷ್ಟಿಸುವುದು

ಶಾಲಾ ಪಠ್ಯಪುಸ್ತಕಗಳಿಗೆ ಪೂರಕವಾಗಿ ಓದುವ ಸಾಮಗ್ರಿಗಳನ್ನು ಹುಡುಕುವುದು ಕಷ್ಟವಾಗಬಹುದು ಆದರೆ ನಿಮ್ಮ ವಿದ್ಯಾರ್ಥಿಗಳು ಓದಲು ಬಯಸಿದರೆ ಸಾಧ್ಯವಾದಷ್ಟೂ ಆ ಅಗತ್ಯವನ್ನು ನೀವು ಪೂರೈಸಬೇಕು. ಶಾಲೆಗಳಲಲ್ಇ ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವುದರಲ್ಲಿ ನಿರತರಾಗಿರುವ ಶಿಕ್ಷಕರ ನಾಲ್ಕು ವಿಚಾರಗಳು ಇಲ್ಲಿವೆ :

ಬಣ್ಣ ಬಣ್ಣದ ಮ್ಯಾಗಜಿನ್ ಗಳಿಂದ ಸೂಕ್ತವಾದ ಓದುವ ಬರಹಗಳನ್ನು ಕತ್ತರಿಸಿಟ್ಟುಕೊಳ್ಳುವುದು ಮತ್ತು ಅದನ್ನು ಪುಸ್ತಕ ಅಥವಾ ಚಾರ್ಟ್ ಮೇಲೆ ಅಂಟಿಸುವುದು

ಪೋಷಕರು, ಸಮುದಾಯದ ಸದಸ್ಯರು ಅಥವಾ ಶಾಲೆಗೆ ಭೇಟಿ ಕೊಡುವವರಿಂದ ಪುಸ್ತಕ - ಮ್ಯಾಗಜೀನ್ ಗಳನ್ನು ದಾನವಾಗಿ ಪಡೆಯುವುದು

ಸರ್ಕಾರೇತರ ಸಂಸ್ಥೆ (NGO) ಗಳಾದ ರೂಮ್ ಟು ರೀಡ್, ಪ್ರಥಮ್ ಮೊದಲಾದವುಗಳೊಂದಿಗೆ ಸಂಪರ್ಕ ಸಾಧಿಸಿ, ಪುಸ್ತಕಗಳನ್ನು ದಾನವಾಗಿ ಪಡೆಯುವುದು

ಪುಸ್ತಕಗಳನ್ನು ಬೋಧನಾ-ಕಲಿಕೋಪಕರಣಗಳ ಭತ್ಯೆಯಿಂದ ಖರೀದಿಸುವುದು

ಈಗ ಓದನ್ನು ಉತ್ತೇಜಿಸುವ ಪರಿಸರವನ್ನು ಹೇಗೆ ಸೃಷ್ಟಿಸುತ್ತೀರಿ ಎಂದು ಆಲೋಚಿಸಿ. ಮೊದಲಿಗೆ ಇಲ್ಲಿ ಕೆಲವು ಹೊಳಹುಗಳಿವೆ:

ಓದುವ ಸಂಪನ್ಮೂಲಗಳ ಸಂಗ್ರಹಿಸುವಿಕೆ

ಎಷ್ಟು ಸಾಧ್ಯವೋ ಅಷ್ಟು ಅನೇಕ ಓದುವ ಸಾಮಗ್ರಿಗಳನ್ನು ಸಂಗ್ರಹಿಸುವುದರಿಂದ ಕ್ರಮೇಣ ಆ ಸಂಗ್ರಹ ಹೆಚ್ಚುತ್ತಾ ಹೋಗುತ್ತದೆ. ನಿಮ್ಮ ಸಂಗ್ರಹವು ಬೇರೆ ಬೇರೆ ಶ್ರೇಣಿಯ ಓದುವ ಸಾಮರ್ಥ್ಯದ ಮಟ್ಟಗಳನ್ನು ಒಳಗೊಂಡಿರಬೇಕು. ಲಭ್ಯವಿರುವ ಪುಸ್ತಕಗಳಲ್ಲಿ ವೈವಿಧ್ಯಮಯವಾದ ಸಾಹಿತ್ಯ ಪ್ರಕಾರಗಳಿರಬೇಕು:

ಕಥೆ ಪುಸ್ತಕಗಳು

ಕ್ರೀಡೆಗಳು, ಪ್ರಕೃತಿ, ವಸ್ತುಗಳ ತಯಾರಿ ಕುರಿತ ಪುಸ್ತಕಗಳು

ಶಬ್ಧಕೋಶಗಳು ಮತ್ತು ಭೂಪಟಗಳ ಪುಸ್ತಕಗಳು (atlases)

ಕವನಸಂಕಲನಗಳು

ಹಾಸ್ಯ ಮತ್ತು ಒಗಟು ಪುಸ್ತಕಗಳು

ಸಾಧ್ಯವಾದಲ್ಲಿ, ವಿದ್ಯಾರ್ಥಿಗಳ ಮನೆ ಭಾಷೆಯಲ್ಲಿನ ಪುಸ್ತಕಗಳು

ಸುದ್ಧಿ ಪತ್ರಿಕೆ, ಮ್ಯಾಗಜಿನ್ ಮತ್ತು ಕಾಮಿಕ್ಸ್ ಗಳನ್ನು ಸಂಗ್ರಹಿಸಿ ಅವರ ಸಮುದಾಯದಿಂದ ಸೂಕ್ತವಾದ ಓದುವ ಸಾಮಗ್ರಿಯನ್ನು ಹುಡುಕಿ ತರಲು ನಿಮ್ಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ.

ಪುಸ್ತಕ ತಯಾರಿಸುವಿಕೆ

ನಿಮ್ಮ ವಿದ್ಯಾರ್ಥಿಗಳು ತಮ್ಮದೇ ಆದ ಕವಿತೆಗಳು ಅಥವಾ ಸಣ್ಣ ಕಥೆಗಳನ್ನು ಹೊಂದಿರುವ ಪುಸ್ತಕವನ್ನು ತಯಾರಿಸಬಹುದು. ಅವರು ಒಂದು ಸಣ್ಣ ನಾಟಕವನ್ನು ಅಥವಾ ಪಾಠದಲ್ಲಿನ ಒಂದು ವಿಷಯ ವಸ್ತುವಿನ ಕುರಿತು ಬರೆಯಬಹುದು. ಬೇರೆಯವರು ಓದಲು ಬಯಸುವಂತಾಗಲು ವಿದ್ಯಾರ್ಥಿಗಳು ಪುಸ್ತಕಕ್ಕೆ ಮುಖ ಪುಟವನ್ನು ವಿನ್ಯಾಸಗೊಳಿಸಬಹುದು.

ವಿಶೇಷ ಪ್ರದರ್ಶನಗಳು

ಉದಾಹರಣೆಗೆ ನೀರು ಅಥವಾ ಸಾರಿಗೆ ಮೊದಲಾದ ಮುಖ್ಯ ವಿಷಯ (theme) ಹೊಂದಿದ ಪ್ರದರ್ಶನಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಕುತೂಹಲ ಮೂಡಿ, ಚರ್ಚೆ ಏರ್ಪಟ್ಟು, ತಮ್ಮಷ್ಟಕ್ಕೆ ತಾವೇ ಮಾಹಿತಿ ಕಲೆ ಹಾಕಲು ಪ್ರೋತ್ಸಾಹಿಸಿದಂತಾಗುತ್ತದೆ. ಪುಸ್ತಕ ಪ್ರದರ್ಶನಗಳಿಗೆ ಪೂರಕವಾಗಿ ಗೋಡೆಯ ಮೇಲೆ ಪೋಸ್ಟರ್ ಗಳು, ಚಿತ್ರಪಟಗಳು ಮತ್ತು ಛಾಯಾಚಿತ್ರಗಳನ್ನು ಹಾಕಬಹುದು. ವಿದ್ಯಾರ್ಥಿಗಳ ಆಸಕ್ತಿಯನ್ನು ಕಾಪಾಡಿಕೊಳ್ಳಲು, ಗೋಡೆ ಪ್ರದರ್ಶನಗಳಲ್ಲಿ ಅವರ ಕಾರ್ಯ, ತಯಾರಿಸಿದ ಸಾಮಗ್ರಿಗಳನ್ನು ಸೇರಿಸಿ, ಆಗಾಗ್ಗೆ ಬದಲಾಯಿಸುವುದು ಉತ್ತಮ.

ನಿಮಗೆ ಲಭ್ಯವಿರುವ ಓದುವ ಸಾಮಗ್ರಿಗಳು ಗೊತ್ತಿದ್ದಲ್ಲಿ, ಅವರು ಹುಡುಕುತ್ತಿರುವ ಮಾಹಿತಿಯನ್ನು ಅವುಗಳಿಂದ ಪಡೆಯುವಂತೆ ಮಾರ್ಗದರ್ಶನ ಮಾಡಬಹುದು.

ಓದುವ ಮೂಲೆಯನ್ನು ಸೃಷ್ಟಿಸುವುದು

ನಿಮ್ಮ ತರಗತಿ ಅಥವಾ ಶಾಲೆಯಲ್ಲಿ ಓದುವ ಸ್ಥಳ ಅಥವಾ ಮೂಲೆಗಾಗಿ ಒಂದು ಜಾಗವನ್ನು ಗುರುತಿಸಿ. ಅದರ ಉದ್ದೇಶ ಸ್ಪಷ್ಟವಾಗಿರುವಂತೆ, ಒಂದು ದೊಡ್ಡ ಹೆಸರು/ಸಂಕೇತ ಇರಲಿ. ವಿದ್ಯಾರ್ಥಿಗಳಿಗೆ ಓದಲು ಆಕರ್ಷಕ-ಆರಾಮದಾಯಕ ಸ್ಥಳವನ್ನು ಒದಗಿಸಿ. ಸಾಧ್ಯವಾದರೆ, ಚಾಪೆ ಅಥವಾ ಕುರ್ಚಿಗಳನ್ನು ಹಾಕಿ.

ಸಂಗ್ರಹಿಸಿದ ಓದುವ ಸಾಮಗ್ರಿಗಳನ್ನು ನೋಡಿಕೊಳ್ಳಲು ಮತ್ತು ದಾಖಲೆ ನಿರ್ವಹಿಸಲು ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅವರನ್ನೇ ಸ್ವಯಂ ಸೇವಕರಾಗುವಂತೆ ಹೇಳಿ. ಕಪಾಟುಗಳಲ್ಲಿರಲಿ ಅಥವಾ ಪೆಟ್ಟಿಗೆಗಳಲ್ಲಿರಲಿ, ವಿದ್ಯಾರ್ಥಿಗಳಿಗೆ ಸಾಮಗ್ರಿಗಳು ಪ್ರತಿದಿನ ಲಭ್ಯವಾಗುವಂತೆ ನೋಡಿಕೊಳ್ಳಿ. ನಿರಂತರವಾಗಿ ಅವುಗಳನ್ನು ಹೊರಗಿಡಲು, ಸ್ವಚ್ಛತೆ ಕಾಪಾಡಲು ಬೇರೆ ಬೇರೆ ವಿದ್ಯಾರ್ಥಿಗಳಿಗೆ ತಿಳಿಸಿ. ಪುಸ್ತಕ ಹರಿದುಹೋಗಿದ್ದಲ್ಲಿ, ಹಾಳಾಗಿದ್ದಲ್ಲಿ ಅವುಗಳನ್ನು ಸರಿಪಡಿಸುವಂತೆ ಪ್ರೋತ್ಸಾಹ ನೀಡಿ. ನಿಮ್ಮ ವಿದ್ಯಾರ್ಥಿಗಳು ಹೆಚ್ಚು ತೊಡಗಿಕೊಂಡಷ್ಟೂ, ಈ ಜಾಗ ಮತ್ತು ಅದರೊಮದಿಗೆ ಸೇರಿರುವ ಓದುವ ಪ್ರಕ್ರಿಯೆಯನ್ನು ತಮ್ಮದಾಗಿಸಿಕೊಳ್ಳುತ್ತಾರೆ.

## ಸಂಪನ್ಮೂಲ 2: ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು

ಪಠ್ಯಪುಸ್ತಕಗಳನ್ನು ಮಾತ್ರವಲ್ಲದೇ, ಇನ್ನೂ ಅನೇಕ ಕಲಿಕಾ ಸಂಪನ್ಮೂಲಗಳನ್ನು ಬೋಧನೆಯಲ್ಲಿ ಬಳಸಬಹುದಾಗಿದೆ. ವಿವಿಧ ಜ್ಞಾನೇಂದ್ರಿಯಗಳನ್ನು ಬಳಸುವ (ದೃಷ್ಟಿ, ಶ್ರವಣ, ಸ್ಪರ್ಶ, ವಾಸನೆ, ರುಚಿ) ಕಲಿಕಾ ಮಾರ್ಗಗಳನ್ನು ತೋರಿಸಿದರೆ, ವಿವಿಧ ವಿಧಾನಗಳಲ್ಲಿ ಕಲಿಯುವ ವಿದ್ಯಾರ್ಥಿಗಳನ್ನು ಮೆಚ್ಚಿಸಿದಂತಾಗುತ್ತದೆ. ನಿಮ್ಮ ಸುತ್ತಮುತ್ತಲೂ ಇರುವ ಸಂಪನ್ಮೂಲಗಳನ್ನು  ತರಗತಿಯಲ್ಲಿ ಬಳಸಿ, ನಿಮ್ಮ ವಿದ್ಯಾರ್ಥಿಗಳ ಕಲಿಕೆಗೆ ನೆರವಾಗಬಹುದು. ಯಾವುದೇ ಶಾಲೆಯು ತನ್ನದೇ ಆದ ಕಲಿಕಾ ಸಂಪನ್ಮೂಲಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಅಥವಾ ವೆಚ್ಚರಹಿತವಾಗಿ ತಯಾರಿಸಿಕೊಳ್ಳಬಹುದು. ಹೀಗೆ ಸ್ಥಳೀಯ ವಸ್ತುಗಳನ್ನು ಕ್ರೋಢೀಕರಿಸಿ, ನಿಮ್ಮ ವಿದ್ಯಾರ್ಥಿಗಳ ದೈನಂದಿನ ಜೀವನ ಮತ್ತು ಪಠ್ಯಕ್ರಮದ ನಡುವೆ ಜೋಡಣೆ ಮಾಡಲು ಸಾಧ್ಯ. ನಿಮ್ಮ ಹತ್ತಿರದ ಪರಿಸರದಲ್ಲಿಯೇ, ಅನೇಕ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ನೀವು ಕಾಣುವಿರಿ. ಹಾಗೆಯೇ ಅನೇಕ ರೀತಿಯ ಸ್ವಾಭಾವಿಕ ಸಂಪನ್ಮೂಲಗಳನ್ನೂ ಸಹ ಕಾಣುವಿರಿ. ಇವುಗಳನ್ನು ಬಳಸಿ ನೀವು ಸ್ಥಳೀಯ ಸಮುದಾಯದೊಡನೆ ಸಂಬಂಧ ಕಲ್ಪಿಸಬಹುದು, ಅದರ ಮೌಲ್ಯವನ್ನು ಎತ್ತಿಹಿಡಿಯಬಹುದು.  ಅಷ್ಟೇ ಅಲ್ಲದೆ, ವಿದ್ಯಾರ್ಥಿಗಳು ಅವರ ಪರಿಸರದ ಶ್ರೀಮಂತಿಕೆ ಹಾಗೂ ವೈವಿಧ್ಯತೆಗಳನ್ನು ನೋಡಿ ಪ್ರಚೋದಿತರಾಗಲು ನೆರವಾಗಬಹುದು.  ಇನ್ನೂ ಹೆಚ್ಚಾಗಿ, ವಿದ್ಯಾರ್ಥಿಗಳ ಕಲಿಕೆ ಒಂದು ಸಮಗ್ರವಾಗಿ ಅಂದರೆ ಶಾಲೆಯ ಹೊರಗೆ ಮತ್ತು ಒಳಗೆ ಆಗುವ ಕಲಿಕೆ ಆಗುವ ನಿಟ್ಟಿನಲ್ಲಿ ಶ್ರಮಿಸಬೇಕು.

### ನಿಮ್ಮ ತರಗತಿ ಕೋಣೆಯನ್ನು ಇನ್ನೂ ಹೆಚ್ಚು ಆಕರ್ಷಣೀಯವಾಗಿಸುವುದು

ಜನರು ತಮ್ಮ ಮನೆಗಳನ್ನು ಎಷ್ಟು ಸಾಧ್ಯವೋ ಅಷ್ಟು ಆಕರ್ಷಣೀಯವಾಗಿ ಇಡಲು ಶ್ರಮಿಸುತ್ತಾರೆ. ನೀವು ನಿಮ್ಮ ವಿದ್ಯಾರ್ಥಿಗಳ ಕಲಿಕಾ ಪರಿಸರದ ಬಗ್ಗೆ ಆಲೋಚನೆ ಮಾಡುವುದು ಒಳ್ಳೆಯದು. ನೀವು ನಿಮ್ಮ ತರಗತಿ ಹಾಗೂ ಶಾಲೆಯಲ್ಲಿ ಕಲಿಕೆಯನ್ನುಂಟು ಮಾಡುವ ಒಂದು ಆಕರ್ಷಣೀಯ ಸ್ಥಳವನ್ನಾಗಿ ಮಾಡಲು ತೆಗೆದುಕೊಳ್ಳುವ ಶ್ರಮ ನಿಮ್ಮ ವಿದ್ಯಾರ್ಥಿಗಳ ಮೇಲೆ ಒಂದು ಧನಾತ್ಮಕ ಪ್ರಭಾವ ಬೀರುತ್ತದೆ. ನಿಮ್ಮ ತರಗತಿ ಕೋಣೆಯನ್ನು ನಿಮ್ಮ ವಿದ್ಯಾರ್ಥಿಗಳ ಸಲುವಾಗಿ ಆಸಕ್ತಿದಾಯಕ ಹಾಗೂ ಆಕರ್ಷಣೀಯವಾಗಿಸಲು, ನೀವು ಹೆಚ್ಚಿನದ್ದನ್ನು ಮಾಡಬಹುದು. ಉದಾಹರಣೆಗೆ, ನೀವು

- ಹಳೆಯ ಮ್ಯಾಗಜೀನ್ ಮತ್ತು ಕರಪತ್ರ ಗಳಿಂದ ಭಿತ್ತಿಪತ್ರಗಳನ್ನು(posters) ಸಿದ್ಧಪಡಿಸಬಹುದು
- ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಸ್ತುಗಳು ಮತ್ತು ಕಲಾಕೃತಿಗಳನ್ನು ತರಬಹುದು
- ನಿಮ್ಮ ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ಪ್ರದರ್ಶಿಸಬಹುದು
- ನಿಮ್ಮ ವಿದ್ಯಾರ್ಥಿಗಳಲ್ಲಿ ಕುತೂಹಲವನ್ನುಂಟು ಮಾಡಲು ಹಾಗೂ ಹೊಸ ಕಲಿಕೆಯನ್ನು ಪ್ರೇರೇಪಿಸಲು ತರಗತಿ ಕೋಣೆಯಲ್ಲಿ ಪ್ರದರ್ಶಿಸಿರುವುದನ್ನು ಬದಲಾಯಿಸುತ್ತಿರಬಹುದು

### ಸ್ಥಳೀಯ ಪರಿಣಿತರನ್ನು ನಿಮ್ಮ ತರಗತಿಯಲ್ಲಿ ಬಳಸುವುದು

ಗಣಿತದಲ್ಲಿ ಹಣ ಅಥವಾ ಪರಿಮಾಣದ ಬಗ್ಗೆ ಕೆಲಸ ಮಾಡುತ್ತಿದ್ದರೆ, ಮಾರಾಟಗಾರರು ಅಥವಾ ದರ್ಜಿಯನ್ನು ಕರೆದು ತಮ್ಮ ವೃತ್ತಿಯಲ್ಲಿ ಅವರು ಗಣಿತವನ್ನು ಬಳಸುವ ರೀತಿಯನ್ನು ವಿದ್ಯಾರ್ಥಿಗಳಿಗೆ ವಿವರಿಸುವಂತೆ ವಿನಂತಿಸಿಕೊಳ್ಳಿ. ನೀವು ನಿಮ್ಮ ವಿದ್ಯಾರ್ಥಿಗಳಿಗೆ ಕಲೆಯಲ್ಲಿ ವಿವಿಧ ರಚನೆಗಳು ಹಾಗೂ ಆಕೃತಿಗಳನ್ನು ತಿಳಿಸಬೇಕಿದ್ದರೆ, ಮೆಹಂದಿ ಹಾಕುವ ಕಲೆಯಲ್ಲಿ ಪರಿಣಿತಿ ಹೊಂದಿರುವವರನ್ನು ನಿಮ್ಮ ಶಾಲೆಗೆ ಕರೆದು ವಿವಿಧ ಆಕೃತಿ, ವಿನ್ಯಾಸ, ಸಂಪ್ರದಾಯ ಮತ್ತು ತಂತ್ರಗಳನ್ನು ಅವರಿಂದ ತಿಳಿಯಬಹುದು. ಶೈಕ್ಷಣಿಕ ಗುರಿಗಳು ಎಲ್ಲರಿಗೂ ಸ್ಪಷ್ಟವೆನಿಸಿದಾಗ, ಹೀಗೆ ಅತಿಥಿಗಳನ್ನು ಆಹ್ವಾನಿಸಿ, ಕಾರ್ಯ ನಿರ್ವಹಿಸುವುದು ಉತ್ತಮವೆನಿಸುತ್ತದೆ. ಸಮಯಕ್ಕನುಗುಣವಾಗಿ ನಿರೀಕ್ಷೆಗಳ ಹಂಚಿಕೆಯೂ ಸಹ ಆಗುತ್ತದೆ.

ನಿಮ್ಮ ಶಾಲಾ ಸಮುದಾಯದಲ್ಲೇ ಕೆಲವು ಪರಿಣಿತರು (ಉದಾಹರಣೆಗೆ - ಅಡುಗೆ ಭಟ್ಟರು ಅಥವಾ ಯೋಗಕ್ಷೇಮ ನೋಡಿಕೊಳ್ಳುವವರು) ಇರಬಹುದು. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಸಂಬಂಧಿಸಿದಂತೆ, ಇಂತಹ ಪರಿಣಿತರನ್ನು ಸಂದರ್ಶನ ಮಾಡಬಹುದು. ಉದಾಹರಣೆಗೆ, ಅಡುಗೆಯಲ್ಲಿ ಎಷ್ಟು ಪ್ರಮಾಣದ ಆಹಾರ ವಸ್ತುಗಳನ್ನು ಬಳಸಿ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಲಾಗುತ್ತದೆ ಅಥವಾ ಹವಾಮಾನವು ಶಾಲಾ ಆಟದ ಮೈದಾನ ಮತ್ತು ಕಟ್ಟಡಗಳ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ.

### ಹೊರಗಿನ ಪರಿಸರವನ್ನು ಬಳಸುವುದು

ನಿಮ್ಮ ಪಾಠ ಬೋಧನೆಯಲ್ಲಿ ಬಳಸಬಹುದಾದಂತಹ ಅನೇಕ ಸಂಪನ್ಮೂಲಗಳು ನಿಮ್ಮ ತರಗತಿಯ ಹೊರಗಡೆ ಲಭ್ಯವಿರುತ್ತದೆ. ಎಲೆಗಳು, ಜೇಡಗಳು, ಸಸ್ಯಗಳು, ಕೀಟಗಳು, ಕಲ್ಲುಗಳು ಅಥವಾ ಮರದ ತುಂಡುಗಳಂತಹ ವಸ್ತುಗಳನ್ನು ನೀವು ಸಂಗ್ರಹಿಸಬಹುದು (ಅಥವಾ ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ತಿಳಿಸಿ) ಈ ಸಂಪನ್ಮೂಲಗಳನ್ನು ನಿಮ್ಮ ತರಗತಿಯ ಒಳಗೆ ಆಕರ್ಷಣೀಯವಾಗಿ ಪ್ರದರ್ಶಿಸುವುದರಿಂದ ನಿಮ್ಮ ಪಾಠ ಬೋಧನೆಯನ್ನು ಇನ್ನೂ ಆಸಕ್ತಿದಾಯಕವನ್ನಾಗಿಸಬಹುದು. ಈ ವಸ್ತುಗಳು ಚರ್ಚೆಗೆ ವಿಷಯವನ್ನು ಒದಗಿಸುತ್ತವೆ ಅಥವಾ ವರ್ಗೀಕರಣದ ಬಗ್ಗೆ ಚಟುವಟಿಕೆಗೆ ಬಳಕೆಯಾಗುತ್ತವೆ ಅಥವಾ ಜೀವಿಗಳು ಮತ್ತು ನಿರ್ಜೀವ ವಸ್ತುಗಳ ಬಗ್ಗೆ ಪ್ರಯೋಗಗಳ ಮೂಲಕ ವಿವರಿಸಲು ಸಹಾಯಕವಾಗುತ್ತವೆ. ನಿಮ್ಮ ಸ್ಥಳೀಯ ಸಮುದಾಯಕ್ಕೆ ಸಮರ್ಪಕವಾಗಿರುವಂತಹ ಮತ್ತು ಕೂಡಲೇ ಲಭ್ಯವಿರುವಂತಹ ಸಂಪನ್ಮೂಲಗಳಾದ ಬಸ್ ವೇಳಾ ಪಟ್ಟಿಗಳು ಅಥವಾ ಜಾಹೀರಾತುಗಳನ್ನು ಪದಗಳ ಗುರುತಿಸುವಿಕೆ, ಗುಣಾತ್ಮಕತೆಯನ್ನು ಹೋಲಿಸುವುದು ಅಥವಾ ಪ್ರಯಾಣದ ಸಮಯವನ್ನು ಲೆಕ್ಕ ಹಾಕುವುದಕ್ಕೆ ಕಲಿಕಾ ಸಂಪನ್ಮೂಲವಾಗಿ ಬಳಸಬಹುದಾಗಿದೆ.

ಹೊರಗಡೆಯಿಂದ ವಸ್ತುಗಳನ್ನು ತರಗತಿಯ ಒಳಗೆ ತರಬಹುದು. ಆದರೆ ಹೊರಾಂಗಣವೇ ವಿಸ್ತರಿಸಿದ ತರಗತಿಯಾಗಬಹುದು. ಎಲ್ಲಾ ವಿದ್ಯಾರ್ಥಿಗಳು ಸುಲಭವಾಗಿ ಚಟುವಟಿಕೆಗಳನ್ನು ನೋಡಲು, ಸಾಮಾನ್ಯವಾಗಿ ಹೊರಗಡೆ ಹೆಚ್ಚು ಸ್ಥಳಾವಕಾಶವಿರುತ್ತದೆ. ನಿಮ್ಮ ವಿದ್ಯಾರ್ಥಿಗಳನ್ನು ಕಲಿಕೆಗಾಗಿ ಹೊರಗಡೆ ಕರೆದುಕೊಂಡು ಹೋದಾಗ, ಅವರು ಈ ಕೆಳಕಂಡ ಚಟುವಟಿಕೆಗಳನ್ನು ಮಾಡಬಹುದು:

- ವೃತ್ತದ ಮೇಲಿರುವ ಪ್ರತಿಯೊಂದು ಬಿಂದುವೂ, ಕೇಂದ್ರ ಬಿಂದುವಿನಿಂದ ಸಮಾನ ದೂರದಲ್ಲಿರುತ್ತದೆ ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ಮಾಡಿ ತೋರಿಸುವುದು

- ಒಂದು ದಿನದ ವಿವಿಧ ಸಮಯಗಳಲ್ಲಿ ನೆರಳುಗಳ ಉದ್ದವನ್ನು ದಾಖಲಿಸಬಹುದು
- ಸೂಚನೆಗಳು ಹಾಗೂ ಚಿಹ್ನೆಗಳನ್ನು ಓದುವುದು
- ಸಮೀಕ್ಷೆಗಳು ಮತ್ತು ಸಂದರ್ಶನಗಳನ್ನು ಮಾಡುವುದು
- ಸೌರಚಾಲಿತ ಪ್ಯಾನೆಲ್ ಗಳನ್ನು ಒಂದು ಸ್ಥಳದಲ್ಲಿ ಸ್ಥಾಪಿಸುವುದು
- ಪೈರಿನ ಬೆಳವಣಿಗೆ ಮತ್ತು ಮಳೆ ಪ್ರಮಾಣವನ್ನು ನಿರ್ವಹಿಸುವುದು

ಹೊರಗಡೆ ವಾತಾವರಣದಲ್ಲಿ, ಅವರ ಕಲಿಕೆಯು ನೈಜತೆ ಮತ್ತು ಅವರದೇ ಆದ ಸ್ವತಃ ಅನುಭವಗಳ ಆಧಾರದ ಮೇಲೆ ಅವಲಂಬಿತವಾಗಿದೆ ಮತ್ತು ಇದನ್ನು ಇತರೆ ಸಂದರ್ಭಗಳಿಗೆ ವರ್ಗಾಯಿಸಬಹುದಾಗಿದೆ.

ನೀವು ಶಾಲಾ ಆವರಣದಿಂದ ಹೊರಗೆ ಹೋಗಿ ಕಾರ್ಯ ನಿರ್ವಹಿಸ ಬೇಕಿದ್ದರೆ, ನಿಮ್ಮ ಶಾಲೆಯ ನಾಯಕರ ಅನುಮತಿಯನ್ನು ತೆಗದುಕೊಳ್ಳುವ ಅವಶ್ಯಕತೆಯಿದೆ, ಯಾವ ಸಮಯದಲ್ಲಿ ಹೋಗಬೇಕು ಎಂದು ಮೊದಲೇ ಯೋಜಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳು ನಿಯಮಗಳನ್ನು ಸ್ಪಷ್ಟವಾಗಿ ತಿಳಿದಿರಬೇಕು. ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ಶಾಲಾ ಆವರಣದಿಂದ ಹೊರಗೆ ಹೋಗುವ ಮೊದಲು, ಏನನ್ನು ಕಲಿಯಬೇಕು ಎಂಬುದರ ಕುರಿತು ಸ್ಪಷ್ಟ ಅರಿವು ಇರಬೇಕು.

**ಸಂಪನ್ಮೂಲಗಳನ್ನು ಹೊಂದಿಸುವುದು/ಮಾರ್ಪಡಿಸುವುದು**

ನಿಮ್ಮ ವಿದ್ಯಾರ್ಥಿಗಳಿಗೆ ಹೆಚ್ಚು ಸೂಕ್ತವಾಗಿರುವಂತೆ, ಈಗಿರುವ ಸಂಪನ್ಮೂಲಗಳನ್ನು ನೀವು ಮಾರ್ಪಡಿಸಬಹುದು/ಹೊಂದಿಸಬಹುದು. ಈ ಬದಲಾವಣೆಗಳು ಚಿಕ್ಕದೇ ಆಗಿದ್ದರೂ, ಹೆಚ್ಚಿನ ವ್ಯತ್ಯಾಸವನ್ನು ಮಾಡಬಲ್ಲವು. ವಿಶೇಷವಾಗಿ, ನೀವು ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸರಿ ಹೊಂದುವಂತೆ ಕಲಿಕೆಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದರೆ, ಇಂತಹ ಮಾರ್ಪಾಡುಗಳು ಹೆಚ್ಚಿನ ವ್ಯತ್ಯಾಸವನ್ನು ಮಾಡಬಲ್ಲವು. ಉದಾಹರಣೆಗೆ, ಬೇರೆ ರಾಜ್ಯಕ್ಕೆ ಸಂಬಂಧಿಸಿದವರಾಗಿದ್ದರೆ, ಸ್ಥಳದ ಹೆಸರು ಹಾಗೂ ವ್ಯಕ್ತಿಯ ಹೆಸರನ್ನು ಬದಲಾಯಿಸುವುದು ಅಥವಾ ಒಂದು ಹಾಡಿನಲ್ಲಿರುವ ವ್ಯಕ್ತಿಯನ್ನು ಬದಲಾಯಿಸುವುದು ಅಥವಾ ವಿಶೇಷ ಸಾಮರ್ಥ್ಯವುಳ್ಳ ಒಂದು ಮಗುವನ್ನು ಕಥೆಯಲ್ಲಿ ಪರಿಚಯಿಸುವುದು. ಹೀಗೆ ನೀವು ಸಂಪನ್ಮೂಲಗಳನ್ನು ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಹಾಗೂ ಅವರ ಕಲಿಕೆಗೆ ಸೂಕ್ತವಾಗಿರುವಂತೆ ಸಿದ್ಧಪಡಿಸಬಹುದು.

ಇನ್ನೂ ಹೆಚ್ಚು ಸಂಪನ್ಮೂಲಭರಿತರಾಗಲು ನಿಮ್ಮ ಸಹೋದ್ಯೋಗಿಗಳ ಜೊತೆ ಕಾರ್ಯ ನಿರ್ವಹಿಸಿ. ನೀವು ಹಾಗೂ ನಿಮ್ಮ ಸಹೋದ್ಯೋಗಿಯ ನಡುವೆ ಇನ್ನೂ ಹೆಚ್ಚಿನ ಶ್ರೇಣಿಕೃತ ಕೌಶಲಗಳಿದ್ದು, ಇದು ಸಂಪನ್ಮೂಲಗಳ ಮಾರ್ಪಡಿಸುವಿಕೆ/ಹೊಂದಿಸುವಿಕೆ ಹಾಗೂ ಹೊಸ ಸಂಪನ್ಮೂಲಗಳ ಸಿದ್ಧಪಡಿಸುವಿಕೆಗೆ ಸಹಾಯ ಮಾಡುತ್ತದೆ. ನಿಮ್ಮ ಒಬ್ಬ ಸಹೋದ್ಯೋಗಿಗೆ ಸಂಗೀತದಲ್ಲಿ ಕೌಶಲವಿರಬಹುದು, ಇನ್ನೊಬ್ಬರಿಗೆ ಗೊಂಬೆಗಳನ್ನು ಸಿದ್ಧಪಡಿಸುವ ಬಗ್ಗೆ ಅಥವಾ ತರಗತಿಯ ಹೊರಗೆ ವಿಜ್ಞಾನ ಚಟುವಟಿಕೆಗಳನ್ನು ಆಯೋಜಿಸುವುದರ ಬಗ್ಗೆ ಉತ್ತಮ ಕೌಶಲಗಳನ್ನು ಹೊಂದಿರಬಹುದು. ನೀವು ನಿಮ್ಮ ತರಗತಿಯಲ್ಲಿ ಬಳಸುವ ಸಂಪನ್ಮೂಲಗಳನ್ನು ನಿಮ್ಮ ಸಹೋದ್ಯೋಗಿಗಳ ಜೊತೆ ಹಂಚಿಕೊಳ್ಳಿ. ಇದರಿಂದ ನಿಮ್ಮ ಶಾಲೆಯ ಎಲ್ಲಾ ಕ್ಷೇತ್ರಗಳಲ್ಲಿ ಕಲಿಕಾ ವಾತಾವರಣ ಶ್ರೀಮಂತವಾಗಲಿದೆ.

## ಹೆಚ್ಚುವರಿ ಸಂಪನ್ಮೂಲಗಳು

- NCERT’s Department of Education in Languages (look under ‘Activities’ and ‘Publications’, in particular): http://www.ncert.nic.in/departments/nie/del/index_dl.html
- Room to Read, India: http://www.roomtoread.org/india
- TeachingEnglish Radio India: http://www.britishcouncil.in/teach/teachingenglish-radio-india

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ

Austin, R. (ed.) (2009) *Letting the Outside In*. London: Trentham Books.

Bridges, L. (1995) *Creating Your Classroom Community*. Portland, ME: Stenhouse Publishers.

Department for Education and Skills (2006) *Learning Outside the Classroom: Manifesto*. London: DfES Publications. Available from: http://www.lotc.org.uk/wp-content/uploads/2011/03/G1.-LOtC-Manifesto.pdf (accessed 28 October 2014).

Gregory, M. (undated) 'Creating a classroom library' (online), Reading Rockets. Available from : http://www.readingrockets.org/article/creating-classroom-library (accessed 28 October 2014).

National Curriculum Framework 2005 – A Study Guide (2006) 'Position papers by focus: NCF 2005' (online). Available from: http://ncf2005.blogspot.co.uk/2009/07/position-papers-by-focus-groups-ncf.html (accessed 28 October 2014).

Webster, L. and Reed, S. (2012) *The Creative Classroom*. London: Collins.

## Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 1: http://www.scillytoday.com/2012/08/09/islanders-return-from-doe-trip-to-india/india-street-scene/

Figure 4: https://www.flickr.com/photos/jordibernabeu/15155376815/

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.